ದಿನಗಳುರುಳಿದಂತೆ ಅವನು ಕೆಫೆಯಲ್ಲಿರುವುದು ಕಡಿಮೆಯಾಗಿ, ಲೀಸಾಳ ಮನೆಯಲ್ಲಿ ಕಾಲ ಕಳೆಯುವುದು ಹೆಚ್ಚಾಯಿತು. ಅವಳ ಮಕ್ಕಳೂ ಇವನಿಗೆ ಆಪ್ತರಾದರು. ಕಾದಂಬರಿಯ ರಚನೆ ಅಲ್ಲಿಯೇ ಅವ್ಯಾಹತವಾಗಿ ಸಾಗಿತು. ಇಬ್ಬರೂ ಬಯಸಿದಾಗ ಅವನು ಅವಳ ಮನೆಯಲ್ಲಿಯೇ ಮಲಗಿದ. ಲೀಸಾಳ ನೆರೆಹೊರೆಯವರ ಪರಿಚಯ ಮಾಡಿಕೊಂಡ, ಅವರ ಮಕ್ಕಳ ಜೊತೆ ಆಟವಾಡಿದ, ಅವರಿಗೆ ಅವರ ಶಾಪಿಂಗಿನಲ್ಲಿ ನೆರವಾದ. ಅಲ್ಲಿಯ ಜನರ ಆಶೋತ್ತರಗಳನ್ನು ಅರ್ಥ ಮಾಡಿಕೊಂಡ. ಅವರ ವ್ಯಾಜ್ಯ, ಮನಸ್ತಾಪ, ಜಗಳ ಮತ್ತು ಅನ್ಯೋನ್ಯತೆಗಳ ನೇರ ದರ್ಶನವಾಯಿತು.

ಡೇವಿಡನ ಚರ್ಯೆಯಲ್ಲಿ ಬದಲಾವಣೆಗಳಾದುದನ್ನು ಸೇರಾ ಗಮನಿಸುತ್ತಾ ಇದ್ದಳು. ಒಮ್ಮೊಮ್ಮೆ ಬೆಳಗಿನ ಜಾವ ಮನೆಗೆ ಹಿಂತಿರುಗುತ್ತಿದ್ದ. ಕೇಳಿದರೆ, "ಸ್ನೇಹಿತರ ಮನೆಯಲ್ಲಿ ಪಾರ್ಟಿ, ಕುಡಿದಿದ್ದೆ. ಅಮಲು ಇಳಿದಾಗ ಬಂದಿದ್ದೇನೆ" ಎಂದು ಜಾರಿಕೊಳ್ಳುತ್ತಿದ್ದ. ಒಮ್ಮೆ ಡೇವಿಡ್ ಮಲಗಿದ್ದಾಗ ಸೇರಾ ಅವನ ಕಾರನ್ನು ತೆರೆದು ನೋಡಿದಳು. ಅಲ್ಲಿ ಮಗುವಿನ ಸಾಕ್ಸನ್ನು ಕಂಡು ಆಶ್ಚರ್ಯ ಪಟ್ಟಳು. ಗ್ಲೊವ್ ಬಾಕ್ಸ್ ತೆರೆದಾಗ ಅಲ್ಲಿ ಹೆಂಗಸರು ಉಪಯೋಗಿಸುವ ಮಾತ್ರೆಗಳು, ಗರ್ಭನಿರೋಧಕ ಕಂಡೋಮ್ ಕೂಡ. ಅಂದು ಏನನ್ನೂ ಹೇಳದೇ ಸುಮ್ಮನಿದ್ದಳು.

ಮತ್ತೊಂದು ದಿನ ಲೀಸಾ ಕೆಫೆಗೆ ಬಂದು "ಇಂದು ಏನಾಯಿತು ಗೊತ್ತೆ?" ಎಂದು ಮಾತನಾರಂಭಿಸಿದಳು.

"ಏನಾಯಿತು?"

"ಬರುತ್ತಾ ಇರುವಾಗ ಶಾಪಿಂಗ್ ಸೆಂಟರಿನಲ್ಲಿ ಪಾರ್ಲಿಮೆಂಟ್ ಸದಸ್ಯೆ ಜ್ಯೂಡಿ ನಿಂತಿದ್ದಳು, ಜನರನ್ನು ಭೇಟಿ ಮಾಡಬೇಕೆಂದೇ. ನಾನೂ ಹೋಗಿ ಅವಳೊಡನೆ ಮಾತನಾಡಿದೆ."

"ಏನು ಕೇಳಿದೆ ನೀನು?"

"ನಾನು ಹೇಳಿದೆ, ಬಡವರಿಗೆ ನಿಮ್ಮ ಸರ್ಕಾರ ಮಾಡಿರುವುದು ಏನೇನೂ ಇಲ್ಲ. ನೀವು ಧನಿಕರನ್ನು ಮಾತ್ರ ನೋಡಿಕೊಳ್ಳುತ್ತೀರಿ. ನಾನು ಓದಿ ಮುಂದೆ ಬರಬೇಕು. ನನಗೆ ಮಕ್ಕಳು ಬೇರೆ. ನಾನು ಕೆಲಸ ಮಾಡಬಹುದು ಅಥವಾ ಓದಬಹುದು. ಎರಡನ್ನೂ ನಿಭಾಯಿಸುವುದು ಕಷ್ಟ. ನನ್ನಂಥ ಜನಕ್ಕೆ ನೀವು ಏನಾದರೂ ಯೋಜನೆ ಹಾಕಿಕೊಳ್ಳಬೇಕು."

"ಅವಳ ಉತ್ತರ?"

"ತುಂಬಾ ಸಮಂಜಸವಾದ ಮಾತು ನಿನ್ನದು. ನಾನು ಯೋಚನೆ ಮಾಡುತ್ತೇನೆ. ನಿನಗೆ ಏನಾದರೂ ಹೊಳೆದರೆ ನನ್ನ ಆಫೀಸಿಗೆ ಬಂದು ಚರ್ಚೆ ಮಾಡು. ನಿನ್ನಂಥವರು ಇಲ್ಲಿಯ ಎಂಪಿ ಆಗ ಬೇಕು."

"ಪರವಾಗಿಲ್ಲ ನೀನು."

"ಬರೀ ಮಾತನಾಡ್ತೀನಿ ನಾನು. ಆಡಿದ್ದನ್ನ ಕಾರ್ಯರೂಪಕ್ಕೆ ತರಬೇಕು. ನೀವು ಬರೆಯೋ ಜನ. ಮತ್ತೊಂದು ಸಮಸ್ಯೆ ಇದೆ. ಗಮನಿಸಿದ್ದೀರಾ?"

"ಏನದು?"

"ಇಲ್ಲಿ ಸೂಪರ್ ಮಾರ್ಕೆಟ್ ಬರೋದಕ್ಕೆ ಮುಂಚೆ ಒಂದು ಬೇಕರಿ, ಒಂದೆರಡು ತರಕಾರಿ ಅಂಗಡಿ, ಮಾಂಸದ ಅಂಗಡಿ ಎಲ್ಲಾ ಇದ್ದವು. ಈ ಸೂಪರ್ ಮಾರ್ಕೆಟ್‌ನವರು ಬ್ರೆಡ್, ತರಕಾರಿ ಮತ್ತು ಮಾಂಸ ಎಲ್ಲವನ್ನ ತೀರಾ ಅಗ್ಗದ ಬೆಲೆಗೆ ಮಾರಲಾರಂಭಿಸಿದರು. ಪರಿಣಾಮ ಏನಾಯಿತು ಗೊತ್ತೇ? ಕೆಲವೇ ತಿಂಗಳಲ್ಲಿ ಆ ಅಂಗಡಿಗಳೆಲ್ಲಾ ಪಾಪರ್ ಆಗಿ ಮುಚ್ಚಿಹೋದವು. ನಂತರ ಸೂಪರ್